International Journal of Kannada Research 2020; 6(4): 40-43

International Journal of Kannada Research
www.kannadajournal.com

ISSN: 2454–5813
IJKR 2020; 6(4): 40-43
© 2020 IJKR
www.kannadajournal.com
Received: 18-08-2020
Accepted: 22-09-2020

**ಶಿವಕುಮಾರ್ ಆರ್**
ಸಂಶೋಧನಾ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು, ಕರ್ನಾಟಕ, ಭಾರತ

# ಆಯ್ದಕ್ಕಿ ಲಕ್ಕಮ್ಮ ಮತ್ತು ಆಯ್ದಕ್ಕಿ ಮಾರಯ್ಯ ಅವರ ವಚನಗಳಲ್ಲಿ ದಾಂಪತ್ಯ ಶಿಸ್ತು

**ಶಿವಕುಮಾರ್. ಆರ್**

ಕೌಟುಂಬಿಕ ವ್ಯವಸ್ಥೆಯಲ್ಲಿ ಸ್ತ್ರೀಪುರುಷರಿಬ್ಬರೂ ಸಮಾನರು ಎಂಬುದು ಕೇವಲ ಮಾತಿಗಷ್ಟೆ ಉಳಿದಿದ್ದು. ಅದನ್ನು ಕಾರ್ಯಗತಗೊಳಿಸುವ ನಡೆ ಮತ್ತಷ್ಟು ಕ್ರಿಯಾಶೀಲವಾಗಬೇಕಿದೆ. ಇಂದಿಗೂ ಸ್ತ್ರೀಪುರುಷ ಸಮಾನತೆಯ ಕೂಗು ಎಲ್ಲೆಡೆ ಕೇಳಿ ಬರುತ್ತಿದೆ. ಹೀಗಿದ್ದರೂ ಸ್ತ್ರೀಪುರುಷ ಸಮಾನತೆಯನ್ನು ಸಾಧಿಸಿದ ಶರಣ ಸಮುದಾಯವೊಂದು ಹನ್ನೆರಡನೇ ಶತಮಾನದಲ್ಲಿ ಜೀವಿಸಿತ್ತು ಎಂಬುದನ್ನು ಮರೆಯುವಂತಿಲ್ಲ. ಹಿರಿಯರು ಕಿರಿಯರಿಗೆ ಮಾರ್ಗದರ್ಶಿಯಾಗುತ್ತಾರೆ ಎಂಬ ಮಾತಿಗೆ ಇಂಬು ನೀಡುವಂತೆ, ಶರಣ ಸಮುದಾಯವು ಆಧುನಿಕ ಕೌಟುಂಬಿಕ ವ್ಯವಸ್ಥೆಗೆ ಆದರ್ಶಪ್ರಾಯವಾಗಿ ನಿಲ್ಲುತ್ತದೆ.

ವೈಧಿಕ ಆಚರಣೆಯ ಪ್ರಕಾರ ಅಧ್ಯಾತ್ಮ ಸಾಧನೆ ಮಾಡಬೇಕಾದರೆ ಸನ್ಯಾಸಿಯಾಗಿ, ದಾಂಪತ್ಯವನ್ನು ತೊರೆಯಬೇಕಿತ್ತು. ದಾಂಪತ್ಯವು ಅಧ್ಯಾತ್ಮದ ತೊಡಕು ಎಂದು ಅವರು ಭಾವಿಸಿದ್ದರು. ಆದರೆ ಶರಣ ಸಮುದಾಯದ ಬಸವಾದಿ ಪ್ರಮಥರು, ದಾಂಪತ್ಯವನ್ನೇ ಅಧ್ಯಾತ್ಮದ ಏಣಿಯನ್ನಾಗಿ ಮಾಡಿಕೊಂಡು ಮೋಕ್ಷವೆಂಬ ವೃಕ್ಷವನ್ನು ಏರಿದರು. ಜೇಡರದಾಸಿಮಯ್ಯ ಹೇಳುವಂತೆ, "ಸತಿ ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ" [1] ಎಂಬಂತೆಯೇ ಬದುಕಿದ್ದರು. ಹೀಗೆ ಬದುಕಿದ್ದ ತಳ ಸಮುದಾಯದ ಆಯ್ದಕ್ಕಿ ಲಕ್ಕಮ್ಮ ಮತ್ತು ಆಯ್ದಕ್ಕಿ ಮಾರಯ್ಯ ದಂಪತಿಗಳು ಪ್ರಮುಖರಾದವರು. ಇವರ ದಾಂಪತ್ಯ ಶಿಸ್ತು ಗಳೆಂದರೆ,

- ಕಾಯಕ ನಿಷ್ಠೆ
- ದಾಸೋಹದ ತುಡಿತ
- ಪರಸ್ಪರ ಗೌರವಿಸುವಿಕೆ.
- ಕಾಯಕನಿಷ್ಠೆ

ಕೌಟುಂಬಿಕ ಅರ್ಥವ್ಯವಸ್ಥೆಯು ಕಾಯಕವನ್ನು ಅವಲಂಬಿಸಿರುತ್ತದೆ. ಕುಟುಂಬದಲ್ಲಿ ಒಬ್ಬ ವ್ಯಕ್ತಿ ಅಥವಾ ಕುಟುಂಬದ ಸದಸ್ಯರೆಲ್ಲರೂ ಕಾಯಕ ಜೀವಿಗಳಾಗಿದ್ದರೆ ಮಾತ್ರ ಆರ್ಥಿಕವಾಗಿ ಸಬಲರಾಗಲು ಸಾಧ್ಯ. ಕುಟುಂಬ ವ್ಯವಸ್ಥೆಯು ರೂಪುಗೊಂಡಾಗಿನಿಂದ ಕಾಯಕ ಅದರ ಒಂದು ಭಾಗವಾಗಿ ಸ್ಥಾನ ಪಡೆದುಕೊಂಡಿದೆ. ಕಾಯಕವನ್ನು ಆಧರಿಸಿ ವ್ಯಕ್ತಿಯನ್ನು ಅಥವಾ ಕುಟುಂಬವನ್ನು ಗುರುತಿಸುವ ಮಟ್ಟಿಗೆ ಅವಿನಾಭಾವ ಸಂಬಂಧವನ್ನು ವೃದ್ಧಿಸಿಕೊಂಡಿವೆ. ಉದಾಹರಣೆಗೆ: ಮಾದಾರ, ಮಡಿವಾಳ, ಒಕ್ಕಲಿಗ, ಕುಂಬಾರ ಇತ್ಯಾದಿ. ಕಾಯಕವನ್ನು ಅದರ ಅಗತ್ಯ ಹಾಗೂ ಅದನ್ನು ಮಾಡುವ ವ್ಯಕ್ತಿಯ ಶ್ರಮದ ಆಧಾರದ ಮೇಲೆ ಗುರುತಿಸಿ ಗೌರವಿಸುವ, ಅದರ ಸ್ಥಾನವನ್ನು ಉನ್ನತೀಕರಿಸುವ ಗುರುತರವಾದ ಜವಾಬ್ದಾರಿಯನ್ನು ಶರಣ ಸಮುದಾಯ ನಿರ್ವಹಿಸುತ್ತದೆ.

ವಚನ ಚಳವಳಿ ಹೆಚ್ಚು ಕ್ರಿಯಾಶೀಲವಾಗಲು ಕಾಯಕ ಪ್ರಜ್ಞೆ ಅಥವಾ ಕಾಯಕ ನಿಷ್ಠೆ ಅಪಾರವಾದ ಕೊಡುಗೆಯನ್ನು ನೀಡಿದೆ. ಕಾಯಕ ನಿಷ್ಠೆಯನ್ನು ತೋರಿದ ದಂಪತಿಗಳಲ್ಲಿ ಆಯ್ದಕ್ಕಿ ಲಕ್ಕಮ್ಮ ಮತ್ತು ಆಯ್ದಕ್ಕಿ ಮಾರಯ್ಯ ಪ್ರಮುಖರಾಗುತ್ತಾರೆ. ಇವರ ಕಾಯಕದ ವಿಚಾರವಾಗಿ ವಿದ್ವಾಂಸರಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. "ಆಯ್ದಕ್ಕಿ ಮಾರಯ್ಯನವರ ಹೆಸರೇ ಸೂಚಿಸುವಂತೆ, ಮುಂಜಾವು ಬಸವಣ್ಣನ ಮುಂತಾದ ಶರಣರ ಅಂಗಳಕ್ಕೆ ಹೋಗಿ, ಅಲ್ಲಿಯೇ ಒಂದೆಡೆ ತಿಪ್ಪೆಯಲ್ಲಿ ಅಕ್ಕಿಯನ್ನು

Corresponding Author:
**ಶಿವಕುಮಾರ್ ಆರ್**
ಸಂಶೋಧನಾ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು, ಕರ್ನಾಟಕ, ಭಾರತ

ತೊಳೆಯುವಾಗ ಕೈ ತಪ್ಪಿ ಬಿದ್ದ ಅಕ್ಕಿಯನ್ನು ಆಯ್ದು ತಂದು, ಮಾರಯ್ಯನವರು ತಮ್ಮ ಪುಣ್ಯಾಂಗನೆ ಅಕ್ಕಮ್ಮನಿಗೆ ಕೊಡುವುದು ದಿನಚರಿ" [2] ಎಂದು ಪ್ರೊ. ಸಂ.ಶಿ ಭೂಸನೂರುಮಠ ಅವರು ಅಭಿಪ್ರಾಯ ಪಡುತ್ತಾರೆ. "ಬೀದಿಯಲ್ಲಿ ಬಿದ್ದ ಅಕ್ಕಿಯನ್ನು ಆಯ್ದು ತಂದು ದಾಸೋಹ ಮಾಡುವವ ಆಯ್ದಕ್ಕಿ ಮಾರಯ್ಯ. ಇವನ ಸತಿ ಲಕ್ಕಮ್ಮ" [3] ಎಂಬುದು ಡಾ.ಎಂ.ಎಂ ಕಲಬುರ್ಗಿ ಅವರ ಅಭಿಪ್ರಾಯ.

"ಭಾವ ಶುದ್ಧವಾಗಿ ಮಹಾಶರಣರು
ತಿಪ್ಪೆಯ ತಪ್ಪಲ ಅಕ್ಕಿಯ ತಂದು

ನಿಶ್ಚಯಿಸಿ ಮಾಡಬೇಕು ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ" [4] ಎಂಬ ಆಯ್ದಕ್ಕಿ ಲಕ್ಕಮ್ಮನ ಮಾತಿನಿಂದ ಅವರು ಮಹಾ ಶರಣರ ತಿಪ್ಪೆಯಲ್ಲಿ ಮಾತ್ರ ಅಕ್ಕಿಯನ್ನು ಆಯ್ದು ತರುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. 'ತಿಪ್ಪೆ' ಪದದ ಕುರಿತು ಚರ್ಚಿಸುತ್ತ, "ತಿಪ್ಪೆ ಎಂದರೆ ವಸ್ತುವಿನ ರಾಶಿ ಎಂಬುದು ಮೂಲಾರ್ಥವಾಗಿ ಕ್ರಮೇಣ ಕಸದರಾಶಿ ಎಂಬ ಅರ್ಥ ವಿಕಾಸವಾಯಿತು" [5] ಎಂಬ ಜಿ.ಕೆ.ಮಧ್ಯಸ್ಥ ಅವರ ಮಾತಿನಂತೆ ತಿಪ್ಪೆಯನ್ನು 'ವಸ್ತುವಿನ ರಾಶಿ' ಎಂದು ಅರ್ಥೈಸಿಕೊಳ್ಳುವುದು ಹೆಚ್ಚು ಸೂಕ್ತ ಎನಿಸುತ್ತದೆ.

ಲಕ್ಕಮ್ಮ ಮತ್ತು ಮಾರಯ್ಯ ತಳಸಮುದಾಯದ ದಂಪತಿಗಳು. ಸಾಮಾನ್ಯವಾಗಿ ತಳಸಮುದಾಯದ ಮಹಿಳೆಯರು ಗಂಡಿಗೆ ಸಮನಾಗಿ ದುಡಿಯುವ, ನಿರ್ಧಾರವನ್ನು ಕೈಗೊಳ್ಳುವ, ಗಂಡನಿಗೆ ಸಲಹೆ ನೀಡುವ ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ. ಇದಕ್ಕೆ ಲಕ್ಕಮ್ಮನೆ ಪ್ರತ್ಯಕ್ಷ ಸಾಕ್ಷಿ. 'ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ' ಎಂದು ಕಾನೂನು ಮಾಡಿದ ಸಮಾಜಕ್ಕೆ ವ್ಯತಿರಿಕ್ತವಾಗಿ ಹಾಗೂ ಬದಲಾವಣೆಯ ಚಿಲುಮೆಯಾಗಿ ಕಾಣಿಸುತ್ತಾಳೆ. ಸತಿಯಾದವಳು ಪತಿಯ ಸೇವೆಯನಷ್ಟೇ ಮಾಡಬೇಕು, ಅದಷ್ಟೇ ಅವಳ ಧರ್ಮ ಎಂಬ ನಿಯಮವನ್ನು ಈ ದಂಪತಿಗಳು ಮುರಿಯುತ್ತಾಳೆ. ಗಂಡು ಹೆಣ್ಣು ಇಬ್ಬರೂ ಒಮ್ಮತದಿಂದ ದುಡಿದಾಗ ಮಾತ್ರ ಸಾಮಾಜಿಕ ಬದಲಾವಣೆ ಅಥವಾ ಸುಧಾರಣೆ ಸಾಧ್ಯ. ಹಾಗೆಯೆ ಬದುಕಿದ ಲಕ್ಕಮ್ಮ ಮತ್ತು ಮಾರಯ್ಯ ದಂಪತಿಗಳು ಆದರ್ಶವಾಗಿ ನಿಲ್ಲುತ್ತಾರೆ. ಲಕ್ಕಮ್ಮ, ಮಾರಯ್ಯನಿಗೆ ಕಾಯಕದ ನೀತಿ ಬೋಧೆ ಮಾಡುತ್ತಾ,

"ಅರಿವರತ ಅರುವೆಯ ಅಂಗದಲ್ಲಿ ಕಟ್ಟಿ
ಬಯಕೆಯರತ ಕೈಯಲ್ಲಿ ತಂಡುಲವನಾಯ್ದುಕೊಂಡು
ಸಂದ ಪ್ರಮಥರ ಅಂಗಳಕ್ಕೆ ಬೇಗ ಹೋಗಿ, ಕೊಂಡು ಬಾರಯ್ಯ,
ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ಮಾರಯ್ಯ" [6]

ಎಂಬ ವಚನ ಅವಳ ಜ್ಞಾನ ದಿಗಂತದ ಪ್ರತಿಫಲನವಾಗಿದೆ. ಆಕೆ ಹುಟ್ಟಿನಿಂದ ತಳ ಸಮುದಾಯದವರಾದರೂ ಜ್ಞಾನದಿಂದ ಮೇಲ್ಪಂಕ್ತಿಯಲ್ಲಿ ನಿಲ್ಲುತ್ತಾಳೆ. ಇದೆಲ್ಲವೂ ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ ಮುಂತಾದ ಶಿವಶರಣರ ಜ್ಞಾನದಾಸೋಹದ ಪ್ರತಿಫಲವಾಗಿದೆ.

ಇಂದು ಲಂಚ ಎಂಬುದು ಎಲ್ಲೆಡೆ ತನ್ನ ಅಧಿಪತ್ಯವನ್ನು ಸಾಧಿಸಿದೆ. ಹುಟ್ಟಿನಿಂದ ಮನುಷ್ಯ ಸಾಯುವ ತನಕ ಲಂಚದ ಸುಳಿಯಲ್ಲಿ ಸಿಲುಕಿ ನರಳುವ ಸ್ಥಿತಿ ನಿರ್ಮಾಣವಾಗಿದೆ. ಶ್ರಮ ರಹಿತ ಜೀವನವನ್ನು ಕಟ್ಟಿಕೊಳ್ಳಲು ಲಂಚ ಸುಲಭ ಮಾರ್ಗವಾಗಿದೆ. ಇಂತಹ ಲಂಚಾವತಾರ ಸಮಾಜದಲ್ಲಿ ನೈತಿಕತೆ ಕೇವಲ ಕತೆಯಾಗಿ ಉಳಿದಿದ್ದು, ಅದರ ಮರು ನಿರ್ಮಾಣ ಮಾಡುವ ನಿಟ್ಟಿನಲ್ಲಿ ಲಕ್ಕಮ್ಮನ,

"ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ
ಇದು ನಿಮ್ಮ ಮನವೊ, ಬಸವಣ್ಣನ ಅನುಮಾನದ ಚಿತ್ತವೊ
ಈ ಮಾತು ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ಸಲ್ಲದ ಬೋನ
ಅಲ್ಲಿಯೇ ಸುರಿದು ಬನ್ನಿ ಮಾರಯ್ಯ" [7]

ಎಂಬ ವಚನ ಹೆಚ್ಚು ಪ್ರಸ್ತುತ ಎನಿಸುತ್ತದೆ. ಹಣ ಮತ್ತು ಅಧಿಕಾರದ ಬಿಸಿಲುಗುದುರೆಯನ್ನು ಏರಿದವರ ಮುಂದೆ ಪ್ರಾಮಾಣಿಕತೆ ಎಂಬುದು ತನ್ನ ಚೈತನ್ಯವನ್ನು ಕಾಪಾಡಿಕೊಳ್ಳಲು ಹೆಣಗಾಡುತ್ತಿದೆ. ಅತಿಯಾದ ಸಂಗ್ರಹ ಗುಣ ಸೋಮಾರಿತನಕ್ಕೆ ದೂಡುತ್ತಿದೆ. ಇಂತಹ ಅನಾರೋಗ್ಯಯುತ ಸಮಾಜಕ್ಕೆ ಲಕ್ಕಮ್ಮನ ವಚನ ಮೂಲಿಕೆಯಾಗಿ ಕೆಲಸ ಮಾಡುತ್ತದೆ. ಗಂಡ ಆದಾಯಕ್ಕಿಂತ ಹೆಚ್ಚು ಸಂಪಾದಿಸಬೇಕೆಂದು ಲಂಚವನ್ನು ಪ್ರೋತ್ಸಾಹಿಸಿ, ಭ್ರಷ್ಟಾಚಾರದ ವಿಷ ಬೇರಿಗೆ ನೀರೆರೆಯುವ ಮನೋವೃತ್ತಿಯುಳ್ಳ ಸತಿಯರಿಗೆ ಲಕ್ಕಮ್ಮನ ದಾಂಪತ್ಯ ಶಿಸ್ತು ಅರ್ಥವಾದರೆ, ಬಹುಪಾಲು ಭಷ್ಟಾಚಾರ ಪ್ರವೃತ್ತಿಯುಳ್ಳ ಮನಸ್ಸುಗಳು ಕಡಿಮೆಯಾಗುತ್ತವೆ.

ಶರಣ ಸಮಾಜದಲ್ಲಿ ಗುರು, ಲಿಂಗ, ಜಂಗಮಕ್ಕೆ ಮೊದಲ ಪ್ರಾಶಸ್ತ್ಯ. ಆದರೆ ಮಾರಯ್ಯ ಕಾಯಕವನ್ನು ಈ ಮೂವರಿಗಿಂತ ಮಿಗಿಲಾಗಿ ಕಾಣುತ್ತಾನೆ. ತನ್ನ ಕಾಯಕದ ಮೇಲೆ ಶ್ರದ್ಧೆ, ಭಕ್ತಿ ಉಳ್ಳವನಾಗಿದ್ದು,

"ಕಾಯಕದಲ್ಲಿ ನಿರತನಾದಡೆ ಗುರು ದರ್ಶನವಾದಡೂ ಮರೆಯಬೇಕು
ಲಿಂಗ ಪೂಜೆಯಾದಡೂ ಮರೆಯಬೇಕು
ಜಂಗಮ ಮುಂದೆ ನಿಂದಿದ್ದಡೂ ಹಂಗು ಹರಿಯಬೇಕು
ಕಾಯಕವೆ ಕೈಲಾಸವಾದ ಕಾರಣ
ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು" [8]

ಎನ್ನುತ್ತಾನೆ. ಮಾರಯ್ಯ ಕಾಯಕ ನಿಷ್ಠೆಯಿಂದ ಮಾತ್ರ ಆತ್ಮತೃಪ್ತಿ ಮೋಕ್ಷ ಸಾಧ್ಯ ಎಂದು ನಂಬಿದ್ದನು. ಸತಿಯ ಮಾತು ಕೇಳಿ ಅಥವಾ ಸ್ವಯಂ ಪ್ರೇರಿತವಾಗಿ ಮೈಗಳ್ಳತನದಿಂದ ದುಡಿಯುವ ಭ್ರಷ್ಟ ಪುರುಷರಿಗೆ ಮಾರಯ್ಯನ ವಚನಗಳ ಅಧ್ಯಯನ ಹೆಚ್ಚು ಅವಶ್ಯಕ. ಹೀಗೆ ಲಕ್ಕಮ್ಮ ಮತ್ತು ಮಾರಯ್ಯ ದಂಪತಿಗಳು ಒಬ್ಬರನ್ನೊಬ್ಬರು ಮೀರಿಸುವ ರೀತಿಯಲ್ಲಿ ಕಾಯಕ ನಿಷ್ಠೆಯನ್ನು ಪಾಲಿಸುತ್ತಾ, ಕಾಯಕದಲ್ಲಿ ದೋಷ ಕಂಡುಬಂದಲ್ಲಿ ಒಬ್ಬರನ್ನೊಬ್ಬರು ತಿದ್ದುತ್ತಾರೆ. ಈ ಪರಿಯ ನಡೆಯನ್ನು ಇಂದಿನ ಸಮಾಜದ ಸತಿಪತಿಯರು ಅನುಸರಿಸಿದರೆ ಕೌಟುಂಬಿಕ ಅರ್ಥವ್ಯವಸ್ಥೆ ಸರ್ವಕಾಲಕ್ಕೂ ನ್ಯಾಯ ಬದ್ಧವಾಗಿರುತ್ತದೆ.

- **ದಾಸೋಹದ ತುಡಿತ**

ಲಕ್ಕಮ್ಮ ಮತ್ತು ಮಾರಯ್ಯ ದಂಪತಿಗಳು ದಾಸೋಹವನ್ನು ಕಾಯಕವೆಂದು ಭಾವಿಸಿಕೊಂಡಿದ್ದರು. ಕಲ್ಯಾಣದ ಶಿವಶರಣರಿಗೆ ದಾಸೋಹ ಮಾಡುವುದೇ ಅವರ ನಿತ್ಯ ಬದುಕಾಗಿತ್ತು. ಸತ್ಯ ಶುದ್ಧ ಕಾಯಕದಿಂದ ಬಂದ ಪ್ರತಿಫಲವನ್ನು ದಾಸೋಹ ಮಾಡುವ ಮೂಲಕ, ತಮ್ಮ ದಾಂಪತ್ಯ ಜೀವನವನ್ನು ಸಾಕಾರಗೊಳಿಸಿಕೊಂಡರು. ದಾಸೋಹ ಎಂಬುದು ಸಂಪತ್ತಿನ ಸದ್ಬಳಕೆಗೆ ಒಂದು ವೇದಿಕೆಯಾಗಿತ್ತು. ಲಕ್ಕಮ್ಮ ಮತ್ತು ಮಾರಯ್ಯ ದಂಪತಿಗಳು ಅನ್ನದಾಸೋಹದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ಅವರ ವಚನಗಳಿಂದಲೇ ವೇದ್ಯವಾಗುತ್ತದೆ. ಪ್ರಸ್ತುತ ಆಹಾರದ ಪೂರೈಕೆ ಹೆಚ್ಚಿದ್ದರೂ

ಹಸಿವಿನಿಂದ ಸಾಯುವವರ ಸಂಖ್ಯೆಯೂ ಹೆಚ್ಚಾಗಿದೆ. ೨೦೧೮ ರ ಜಾಗತಿಕ ಹಸಿವಿನ ಸೂಚ್ಯಂಕ (ಗ್ಲೋಬಲ್ ಹಂಗರ್ ಇಂಡೆಕ್ಸ್) ದಲ್ಲಿ ಭಾರತ ೧೦೩ನೇ ಸ್ಥಾನದಲ್ಲಿದೆ. ಬೆಲಾರಸ್ ಮೊದಲನೇ ಸ್ಥಾನದಲ್ಲಿದೆ. ಇದನ್ನೆಲ್ಲ ಗಮನಿಸಿದರೆ ಅನ್ನದಾಸೋಹ ಕೇವಲ ಶರಣ ಸಮುದಾಯ ಕಾಲಘಟ್ಟಕ್ಕೆ ಮಾತ್ರ ಸೀಮಿತವಾದ ಪರಿಕಲ್ಪನೆಯಲ್ಲ ಎಂಬುದು ಸುಸ್ಪಷ್ಟ. ಜಾಗತಿಕ ಮಟ್ಟದಲ್ಲಿ ಈ ದಾಸೋಹ ಕಲ್ಪನೆಯನ್ನು ಅನುಸರಿಸುವ ಅಗತ್ಯವಿದೆ. ಇದು ಕುಟುಂಬಗಳಿಂದ ಮೊದಲು ಆರಂಭವಾಗಬೇಕು ಎಂಬುದು, ಲಕ್ಕಮ್ಮ ಮತ್ತು ಮಾರಯ್ಯನ ಬದುಕಿನ ಕ್ರಮದಿಂದ ತಿಳಿಯುತ್ತದೆ. ತಮ್ಮ ಬಳಿ ಇರುವುದೆಲ್ಲವೂ ದಾಸೋಹ ಯೋಗ್ಯ ಎಂದು ಹೇಳಲು ಸಾಧ್ಯವಿಲ್ಲ. ಅಕ್ರಮವಾಗಿ ಸಂಪಾದಿಸಿದ ಯಾವುದೇ ವಸ್ತು ದಾಸೋಹ ಯೋಗ್ಯವಾಗುವುದಿಲ್ಲ. ಬೇರೊಬ್ಬರಿಂದ ಬೇಡಿ ತಂದಿದ್ದು ದಾಸೋಹಕ್ಕೆ ಹೊರಗು. ಆ ಪರಿಯ ದಾಸೋಹವನ್ನು ಟೀಕಿಸುತ್ತಾ,

"ಬೇಡಿ ತಂದು ದಾಸೋಹವ ಮಾಡುವನ್ನಬರ
ಪಂಗುಳನ ಪಯಣದಂತೆ ಯಾಚಕತ್ವ ಭಕ್ತಂಗುಂಟೆ?
ಭಕ್ತನಾಗಿ ಹುಟ್ಟಿ ಭಕ್ತರ ಬೇಡಿತಂದು ಮಾಡಿ ಮುಕ್ತಿಯನರಸಲುಂಟೆ?

ಅದು ಅಮರೇಶ್ವರ ಲಿಂಗವ ಮುಟ್ಟದೆ ಇತ್ತಲೆ ಉಳಿಯಿತ್ತು." [9] ಎನ್ನುತ್ತಾನೆ. ಮಾರಯ್ಯನ ಈ ಮಾತು ಸ್ವಶ್ರಮದಿಂದ ಬಂದ ಪ್ರತಿಫಲವನ್ನು ಮಾತ್ರ ದಾಸೋಹ ಎಂದು ಹೇಳುತ್ತಿದೆ. ಈ ಹಿನ್ನೆಲೆಯಲ್ಲಿ ನೋಡಿದರೆ ಇಂದಿನ ಮಠಗಳು ಪರಾವಲಂಬಿಯಾಗಿದ್ದು ಮಾರಯ್ಯನ ಈ ವಚನಕ್ಕೆ ತದ್ವಿರುದ್ಧವಾಗಿ ನಡೆಯುತ್ತಿರುವುದು ವಿಪರ್ಯಾಸದ ಸಂಗತಿ. ಮಾರಯ್ಯ ಮತ್ತು ಲಕ್ಕಮ್ಮ ಶರಣರನ್ನು ಬೇಡಿ ತರುತ್ತಿರಲಿಲ್ಲ, ಮಹಾಶರಣರ ತಿಪ್ಪೆಯ ತಪ್ಪಲ ಅಕ್ಕಿಯ ತಂದು ನಿಶ್ಚೈಸಿ ದಾಸೋಹ ಮಾಡುತ್ತಿದ್ದರು.

ಶರಣರ ದಾಸೋಹ ಮೇಲ್ನೋಟಕ್ಕೆ ಶಿವಶರಣರ ಹಸಿವನ್ನು ನೀಗಿಸುವ ಪದ್ಧತಿಯಂತೆ ಕಂಡುಬಂದರೂ ಅದು ಸಂಪತ್ತಿನ ಸಮಾನ ಹಂಚಿಕೆಯ ಮೂಲ ತತ್ವವನ್ನು ಅಂತರ್ಗತಗೊಳಿಸಿಕೊಂಡಿದೆ. ಅಂದರೆ ಇರುವವರು ಇಲ್ಲದವರಿಗೆ ಅಗತ್ಯವಾದುದನ್ನು ನೀಡುವುದೇ ದಾಸೋಹ. ಅದು ಆಹಾರ, ವಸ್ತ್ರ, ಜ್ಞಾನ ಯಾವುದೇ ಆಗಿದ್ದರೂ ದಾಸೋಹದ ಎನಿಸಿಕೊಳ್ಳುತ್ತದೆ.ಈ ರೀತಿ ದಾಸೋಹ ಮಾಡುವ ಜನರು "ಕಾಯಕವೆಂದು ದಾಯಗಾರಿಕೆಯಲ್ಲಿ ತಂದು ದಾಸೋಹವ ಮಾಡಬಹುದೇ?" [10] ಎಂದು ಲಕ್ಕಮ್ಮ ಪ್ರಶ್ನಿಸುತ್ತಾಳೆ. ದ್ವಂದ್ವ ಮನಸ್ಸಿನಲ್ಲಿ ದಾಸೋಹ ರೂಪದಲ್ಲಿ ಏನನ್ನು ನೀಡಿದರು ಅದು ದಾಸೋಹ ಎಂದು ಕರೆಸಿಕೊಳ್ಳುವುದಿಲ್ಲ. ಅದರ ಪರಿಪೂರ್ಣತೆ ಹಾಗೂ ಸಾರ್ಥಕತೆ ಅಂತರಂಗ ಮತ್ತು ಬಹಿರಂಗ ಎರಡೂ ಒಂದೇ ಆಗಿದ್ದಾಗ ಮಾತ್ರ ಸಾಧ್ಯ. ಆದರೆ ಇಂದಿನಬಹುಪಾಲು ದಾಸೋಹ ಕ್ರಮ ಕೇವಲ ತೋರಿಕೆಯಾಗಿದೆ. ಇಂತಹ ಪ್ರದರ್ಶನದ ದಾಸೋಹ ಕ್ರಮವನ್ನು ಈ ದಂಪತಿಗಳು ತಿರಸ್ಕರಿಸುತ್ತಾರೆ

- **ಪರಸ್ಪರ ಗೌರವಿಸುವಿಕೆ**

ನಮ್ಮ ಕೌಟುಂಬಿಕ ವ್ಯವಸ್ಥೆಯಲ್ಲಿ ಸತಿ ಸೇವಕಿಯಾಗಿ, ಪತಿ ಒಡೆಯನಾಗಿ ಇರಬೇಕೆಂಬ ನಿಯಮವನ್ನು ಔಪಚಾರಿಕವಾಗಿ ಪಾಲಿಸಿಕೊಂಡು ಬರಲಾಗಿದೆ. ಈ ನಿಯಮವನ್ನು ಒಪ್ಪದ ಲಕ್ಕಮ್ಮ ಮತ್ತು ಮಾರಯ್ಯ ದಂಪತಿಗಳು ಪರಸ್ಪರ ಗೌರವ ಹಾಗೂ ಸಮಾನತೆಯ ಭಾವದಲ್ಲಿ ಬದುಕಿದ್ದರು. ಸತಿಪತಿ ಸಾಮರಸ್ಯದಿಂದ ಬದುಕಿದರೆ ಸುಖ ಸಂಸಾರ ಸಾಧ್ಯ ಎಂಬುದನ್ನು ಬದುಕಿ ತೋರಿದರು.

ಒಮ್ಮೆ ದಾಸೋಹಕ್ಕೆ ಅಕ್ಕಿ ಇಲ್ಲದಿದ್ದಾಗ "ಕಾಯಕ ನಿಂದಿತ್ತು ಹೋಗಯ್ಯಾ ಎನ್ನಾಳ್ದನೆ" [11] ಎಂದು ಮಾರಯ್ಯನಿಗೆ ಹೇಳುತ್ತಾಳೆ. ಇಲ್ಲಿ 'ಹೋಗಯ್ಯ' ಎಂದು ಆದೇಶಿಸುವುದರ ಜೊತೆಗೆ 'ಎನ್ನಾಳ್ದನೆ'ಎಂದು ಗೌರವದಿಂದ ಸಂಬೋಧಿಸುತ್ತಾಳೆ. ಮಾರಯ್ಯ ಕೂಡ ಸತಿಯಂತೆ ಸಮಾನ ಮನಸ್ಕನಾಗಿದ್ದು, ಅವಳ ಮಾತುಗಳನ್ನು ಗೌರವಿಸುತ್ತಾ ಅದನ್ನು ಪಾಲಿಸುತ್ತಿದ್ದನು. ಯಾವುದು ನ್ಯಾಯ ಸಮವಾಗಿರುತ್ತದೆಯೋ ಅದನ್ನು ಪ್ರತಿಯೊಬ್ಬರೂ ಒಪ್ಪಬೇಕು. ಆಗ ಮಾತ್ರ ಪರಸ್ಪರ ಅನ್ಯೋನ್ಯತೆ ಸಾಧ್ಯ ಎಂಬುದನ್ನು ಇವರು ತೋರಿಸಿಕೊಟ್ಟಿದ್ದಾರೆ. ಮಾರಯ್ಯ ಸದ್ಭಕ್ತನಾಗಿರುವುದರ ಜೊತೆಗೆ ಸತ್ಪತಿಯೂ ಆಗಿದ್ದನು.

"ನೀ ಸತಿಯಾಗಿ, ನಾ ಪತಿಯಾಗಿ ಉಭಯ ಪ್ರಾಣ ಏಕರೂಪಾಗಿ,
ಎನ್ನಂಗದ ಅಂಗನೆ ಅಮರೇಶ್ವರಲಿಂಗವ ತೋರಾ" [12]

ಎಂದು ಲಕ್ಕಮ್ಮನನ್ನು ತನ್ನೊಂದಿಗೆ ಏಕವಾಗಿಸಿಕೊಳ್ಳುವ ಮೂಲಕ ಸತಿಪತಿ ಸಮಾನತೆಯ ಸೃಷ್ಟಿ ತತ್ವವನ್ನು ಪುನಃ ಸ್ಥಾಪಿಸುತ್ತಾನೆ. ಸತಿ ಇಲ್ಲದೆ ಪತಿಯ ಅಸ್ತಿತ್ವ ಪತಿಇಲ್ಲದೆ ಸತಿಯ ಅಸ್ತಿತ್ವ ಇರುವುದಿಲ್ಲ ಎಂಬುದನ್ನು ಮಾರ್ಮಿಕವಾಗಿ ಮಾರಯ್ಯ ಪ್ರತಿಪಾದಿಸಿದ್ದಾನೆ.

ಒಟ್ಟಾರೆ ಲಕ್ಕಮ್ಮ ಮತ್ತು ಮಾರಯ್ಯ ದಂಪತಿಗಳು ಕಾಯಕ ಮತ್ತು ದಾಸೋಹ ವೆಂಬ ಸತ್ಪಥದಲ್ಲಿ ನಡೆದರು. ಹೀಗೆ ನಡೆಯುವಾಗ ಎಡವುವುದು ಸಹಜ. ಅಂತ ಸಂದರ್ಭದಲ್ಲಿ ಪರಸ್ಪರ ತಿದ್ದುವ ಉದಾರ ಗುಣದಲ್ಲಿ ಬದುಕಿದರು. ಉದಾರತೆ ಇದ್ದಾಗ ಮಾತ್ರ ಆದರ್ಶ ದಂಪತಿಗಳಾಗಲು ಸಾಧ್ಯ. ಇಂದಿನ ದಿನಮಾನಗಳಲ್ಲಿ ಈ ಉದಾರತೆ ಕಡಿಮೆಯಾದ ಕಾರಣ, ಸಣ್ಣ ಪುಟ್ಟ ವಿಷಯಗಳಿಗೆ ಮನಸ್ತಾಪ ಉಂಟಾಗುತ್ತಿದೆ. ಪರಿಣಾಮ ವಿಚ್ಛೇದನ ಪಡೆಯುವವರ ಸಂಖ್ಯೆ ಹೆಚ್ಚಾಗುತ್ತಿದೆ. ಈ ಆತಂಕಕಾರಿ ಘಟನೆಗಳನ್ನು ತಡೆಯಲು ಲಕ್ಕಮ್ಮ ಮತ್ತು ಮಾರಯ್ಯನ ದಾಂಪತ್ಯ ಶಿಸ್ತನ್ನು ಅರ್ಥ ಮಾಡಿಕೊಳ್ಳುವ, ಅದನ್ನು ಅಳವಡಿಸಿಕೊಳ್ಳುವ ಅಗತ್ಯ ಇಂದಿನ ದಂಪತಿಗಳಿಗಿದೆ. ಹಾಗಾಗಿ ಇವರ ವಚನಗಳನ್ನು ಮರು ಓದಿಕೊಳ್ಳಬೇಕಾಗಿದೆ.

**ಪರಾಮರ್ಶನ ಗ್ರಂಥ**


1. ಎಂ.ಎಂ.ಕಲಬುರ್ಗಿ–ಬಸವಯುಗದ ವಚನಮಹಾಸಂಪುಟ:ಒಂದು (ಪ್ರಧಾನ ಸಂಪಾದನೆ) ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು–ತೃತೀಯ ಆವೃತ್ತಿ–೨೦೧೬
2. ಪುಟ್ಟಪ್ಪ ಎಂ–ಆಯ್ದಕ್ಕಿ ಮಾರಯ್ಯ ಮತು ಲಕ್ಕಮ್ಮ
3. ಬಸವ ಅಧ್ಯಯನ ಪೀಠ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು–೨೦೦೫
4. ಮೀನಾಕುಮಾರಿ ಎಸ್. ಪಾಟೀಲ–ಆಯ್ದಕ್ಕಿ ಮಾರಯ್ಯ ಲಕ್ಕಮ್ಮ ದಂಪತಿಗಳು ಒಂದು ಅಧ್ಯಯನ, ವಚನ ಅಧ್ಯಯನ ಕೇಂದ್ರ, ನಾಗನೂರು ರುದ್ರಾಕ್ಷಿಮಠ, ಶಿವಬಸವನಗರ, ಬೆಳಗಾವಿ–೨೦೧೫


**ಉಲ್ಲೇಖಗಳು**


1. ಬಸವಯುಗದ ವಚನ ಮಹಾಸಂಪುಟ:ಒಂದು:– ಸಂಕೀರ್ಣ ವಚನಸಂಪುಟ ಎರಡು, ವಚನ–೮೬೧, ಪುಟ–೧೨೮೫

2. ೧ಉದೃತ, ಎಂ ಪುಟ್ಟಪ್ಪ– ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮ, ಪುಟ–೨೪
3. ಬಸವಯುಗದ ವಚನ ಮಹಾಸಂಪುಟ:ಒಂದು:– ಶಿವಶರಣೆಯರ ವಚನಸಂಪುಟ, ಪುಟ–೯೩೭
4. ಬಸವಯುಗದ ವಚನ ಮಹಾಸಂಪುಟ:ಒಂದು:– ಶಿವಶರಣೆಯರ ವಚನಸಂಪುಟ, ವಚನ–೭೧೨, ಪುಟ–೮೬೬
5. ವಿಜಯ ಕರ್ನಾಟಕ ಅಂತರ್ಜಾಲ ಪತ್ರಿಕೆ– ದಿನಾಂಕ ೦೩/೧೧/೨೦೧೨
6. ಬಸವಯುಗದ ವಚನ ಮಹಾಸಂಪುಟ:ಒಂದು:– ಶಿವಶರಣೆಯರ ವಚನಸಂಪುಟ, ವಚನ–೭೦೫, ಪುಟ–೮೬೬
7. ಅದೇ, ವಚನ–೭೧೧, ಪುಟ–೮೬೬
8. ಬಸವಯುಗದ ವಚನ ಮಹಾಸಂಪುಟ:ಒಂದು:–ಸಂಕೀರ್ಣ ವಚನಸಂಪುಟ ಒಂದು, ವಚನ–೧೧೬೫, ಪುಟ–೧೦೬೮
9. ಅದೇ, ವಚನ–೧೧೭೭, ಪುಟ–೧೦೬೯
10. ಬಸವಯುಗದ ವಚನ ಮಹಾಸಂಪುಟ:ಒಂದು:– ಶಿವಶರಣೆಯರ ವಚನಸಂಪುಟ, ವಚನ–೭೨೩, ಪುಟ–೮೬೭
11. ಅದೇ, ವಚನ–೭೧೨, ಪುಟ–೮೬೬
12. ಬಸವಯುಗದ ವಚನ ಮಹಾಸಂಪುಟ:ಒಂದು:– ಸಂಕೀರ್ಣವಚನಸಂಪುಟ ಎರಡು, ವಚನ–೧೧೬೦, ಪುಟ–೧೦೬೮